# ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ದೂರವಾಣಿ ಸಂಖ್ಯೆ (08472) 256782
ಇ-ಮೇಲ್: dcahrd.gescom@gmail.com

ನಿಗಮ ಕಾರ್ಯಲಯ, ಸ್ಟೇಷನ್ ರಸ್ತೆ
ಜೆಸ್ಕಾಂ, ಕಲಬುರಗಿ-೫೮೫೧೦೨.

ಜೆಸ್ಕಾಂ/ಪ್ರ.ವ್ಯ/ಉಲೆನಿ(ಮಾ.ಸಂ.ಅ)/ಜಿ-11/1404/2022-23/ 515-2571 ದಿನಾಂಕ: 12 DEC 2022

## ಸುತ್ತೋಲೆ

ವಿಷಯ:- ಉದ್ಯೋಗ ಪೂರ್ವ/ಬಡ್ತಿಪೂರ್ವ ತರಬೇತಿಯ ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ ಮಾಪಕ ಓದುಗ/ ಮೇಲ್ವಿಚಾರಕ/ಆಪರೇಟರ್/ನಿರ್ವಹಣಾ ಸಿಬ್ಬಂದಿ/ಕಿರಿಯ ಮಾಪಕ ಓದುಗ ಅಭ್ಯರ್ಥಿಗಳಿಗೆ ದಿನಾಂಕ: 20.01.2023 ರಂದು ಮರು ಪರೀಕ್ಷೆ ನಡೆಸುವ ಕುರಿತು.

** **** **

ಈ ಹಿಂದೆ ಜರುಗಿದ ಉದ್ಯೋಗ ಪೂರ್ವ/ಬಡ್ತಿಪೂರ್ವ ತರಬೇತಿಯ ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ ಮಾಪಕ ಓದುಗ/ಮೇಲ್ವಿಚಾರಕ/ಆಪರೇಟರ್/ನಿರ್ವಹಣಾ ಸಿಬ್ಬಂದಿ/ಕಿರಿಯ ಮಾಪಕ ಓದುಗ ಅಭ್ಯರ್ಥಿಗಳಿಗೆ ದಿನಾಂಕ: 20.01.2023 ರಂದು ಮರು ಪರೀಕ್ಷೆ ನಡೆಸಲು ಉದ್ದೇಶಿಸಲಾಗಿದೆ.

1. ಪರೀಕ್ಷಾ ಶುಲ್ಕ ವಿನಾಯಿತಿ ಹೊಂದಿಲ್ಲದ ಅಭ್ಯರ್ಥಿಗಳು ರೂ. 354/- ಪರೀಕ್ಷಾ ಶುಲ್ಕವನ್ನು ನಿಗಮದ ಯಾವುದಾದರು ಕಛೇರಿಯಲ್ಲಿ ದಿನಾಂಕ: 14.12.2022 ರಿಂದ 29.12.2022 ರ ಒಳಗೆ ಪಾವತಿಸತಕ್ಕದ್ದು.
2. ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಗಳನ್ನು ಸಂಬಂಧಪಟ್ಟ ವೇತನ ವಿತರಣಾಧಿಕಾರಿಗಳಿಗೆ ಸಲ್ಲಿಸಲು ಕೊನೆಯ ದಿನಾಂಕ: 31.12.2022.
3. ಅಭ್ಯರ್ಥಿಗಳು ಭರ್ತಿ ಮಾಡಿ ಸಲ್ಲಿಸಿದ ಎಲ್ಲಾ ಅರ್ಜಿಗಳನ್ನು ವೇತನ ವಿತರಣಾಧಿಕಾರಿಗಳು ಪರಿಶೀಲಿಸಿ ದೃಢೀಕರಿಸಿ ಸಂಬಂಧಪಟ್ಟ ಕಛೇರಿಯಿಂದ ಕ್ರೋಢೀಕರಿಸಿದ ಪತ್ರದೊಂದಿಗೆ ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ.ಅ) ನಿಗಮ ಕಛೇರಿ, ಗುವಿಸಕಂನಿ., ಕಲಬುರಗಿರವರಿಗೆ ಸಲ್ಲಿಸಲು ಕೊನೆಯ ದಿನಾಂಕ 03.01.2023.

**ಅಭ್ಯರ್ಥಿಗಳಿಗೆ ಸೂಚನೆಗಳು:**

1. ಅಭ್ಯರ್ಥಿಗಳು ನಿಗದಿತ ಹೊಸ ನಮೂನೆಯ ಅರ್ಜಿಯನ್ನು ಗುವಿಸಕಂನಿಯ ವೆಬ್‌ಸೈಟ್‌ನಿಂದ ಪಡೆದು (gescom.karnataka.gov.in ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.)
2. ಇಲಾಖಾ ಪರೀಕ್ಷೆಗೆ ನಿಗದಿಪಡಿಸಿರುವ ಪರೀಕ್ಷಾ ಶುಲ್ಕ ರೂ.354/- (ಮೂರು ನೂರಾ ಐವತ್ತುನಾಲ್ಕು ರೂಪಾಯಿಗಳು ಮಾತ್ರ) ಎರಡು ಪ್ರಯತ್ನಗಳಿಗೆ ಮಾತ್ರ ಅಭ್ಯರ್ಥಿಗಳಿಗೆ ಉಚಿತವಾಗಿ ಅನುಮತಿ ನೀಡಲಾಗುವುದು. ತದನಂತರ ಗೊತ್ತುಪಡಿಸಿರುವ ಶುಲ್ಕವನ್ನು ನಿಗಮದ ಯಾವುದಾದರೂ ಕಛೇರಿಯಲ್ಲಿ ಸಂದಾಯ ಮಾಡಿ ಮೂಲ ರಶೀದಿಯನ್ನು ಅರ್ಜಿಯಲ್ಲಿ ಒದಗಿಸಿರುವ ಸ್ಥಳದಲ್ಲಿ ಅಂಟಿಸಬೇಕು. ಒಂದು ಅವಧಿಯ ಪರೀಕ್ಷೆಗೆ ಸಂದಾಯವಾದ ಶುಲ್ಕವನ್ನು ಮುಂದಿನ ಅವಧಿಯ ಪರೀಕ್ಷೆಗಳಿಗೆ ಹೊಂದಿಸಲಾಗುವುದಿಲ್ಲ ಹಾಗೂ ಅಜಾಗರೂಕತೆಯಿಂದ ಹೆಚ್ಚಾಗಿ ಕಟ್ಟಿರುವ ಶುಲ್ಕವನ್ನು ಹೊಂದಾಣಿಕೆ ಮಾಡಲಾಗುವುದಿಲ್ಲಾ.
3. ಪರಿಪೂರ್ಣವಾಗಿ ಭರ್ತಿಮಾಡಿ, ಸಹಿಯನ್ನು ದಾಖಲಿಸಿ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಅರ್ಜಿಯ ಹಾಗೂ ಪ್ರವೇಶ ಪತ್ರದ ಮೇಲೆ ಕಡ್ಡಾಯವಾಗಿ ಅಂಟಿಸಿ ಸಂಬಂಧಪಟ್ಟ ಮುಖ್ಯಸ್ಥರಿಂದ ದೃಢೀಕರಿಸಿದ ಅರ್ಜಿಯನ್ನು ವೇತನ ವಿತರಣಾಧಿಕಾರಿಗಳಿಗೆ ದಿನಾಂಕ: 31.12.2022 ರ ಒಳಗೆ ಸಲ್ಲಿಸತಕ್ಕದ್ದು.

4. ಅರ್ಜಿ ನಮೂನೆಯಲ್ಲಿ ಅಭ್ಯರ್ಥಿಗಳು ಹೆಸರುಗಳನ್ನು ತಮ್ಮ ಸೇವಾಪುಸ್ತಕದಲ್ಲಿ ನಮೂದಿಸಿರುವಂತೆಯೇ ಭರ್ತಿ ಮಾಡುವುದು.
5. ಅಭ್ಯರ್ಥಿಯು ಸದರಿ ಪರೀಕ್ಷೆಯ ಯಾವುದಾದರೂ ಪತ್ರಿಕೆಯಲ್ಲಿ ವಿನಾಯಿತಿ ಹೊಂದಿದ್ದರೆ ಅಂತಹ ಪೂರ್ಣ ವಿವರಗಳನ್ನು ಅರ್ಜಿಯಲ್ಲಿ ನಿಗದಿಪಡಿಸಿದ ಸ್ಥಳದಲ್ಲಿ ನಮೂದಿಸತಕ್ಕದ್ದು.
6. ನಿಗದಿತ ಅರ್ಜಿಯ ಎಲ್ಲಾ ಕಾಲಂಗಳನ್ನು ಸರಿಯಾಗಿ ಭರ್ತಿ ಮಾಡತಕ್ಕದ್ದು. ಉದಾರಹಣೆ: ಹೆಸರು, ಕೆಲಸಕ್ಕೆ ಸೇರಿದಾಗ ಹೊಂದಿದ ಹುದ್ದೆ, ಪ್ರಸ್ತುತ ನಿರ್ವಹಿಸುತ್ತಿರುವ ಹುದ್ದೆ ಪರೀಕ್ಷಾ ಐ.ಡಿ. ಸಂಖ್ಯೆ ವಿನಾಯತಿ ಹೊಂದಿರುವ ವಿವರ ಇತ್ಯಾದಿ.
7. ಕಛೇರಿಯಲ್ಲಿ ಸಂದಾಯ ಮಾಡಿ, ಮೂಲ ರಶೀದಿಯನ್ನು ಅರ್ಜಿಯಲ್ಲಿ ಒದಗಿಸಿರುವ ಸ್ಥಳದಲ್ಲಿ ಅಂಟಿಸಬೇಕು. ಒಂದು ಅವಧಿಯ ಪರೀಕ್ಷೆಗೆ ಸಂದಾಯವಾದ ಶುಲ್ಕವನ್ನು ಮುಂದಿನ ಅವಧಿಯ ಪರೀಕ್ಷೆಗಳಿಗೆ ಹೊಂದಿಸಲಾಗುವುದಿಲ್ಲ ಹಾಗೂ ಅಜಾಗರೂಕತೆಯಿಂದ ಹೆಚ್ಚಾಗಿ ಕಟ್ಟಿರುವ ಶುಲ್ಕವನ್ನು ಹೊಂದಾಣಿಕೆ ಮಾಡುವುದಿಲ್ಲ.
8. ಪಠ್ಯಪುಸ್ತಕಗಳು, ಮಾರ್ಗದರ್ಶಿಕೆಗಳು (ಕೈಪಿಡಿಗಳು) ಟಿಪ್ಪಣಿಗಳು ಮುಂತಾದವುಗಳನ್ನು ಪರೀಕ್ಷಾ ಕೊಠಡಿ ಒಳಗೆ ತರುವಂತಿಲ್ಲ.
9. ಅಭ್ಯರ್ಥಿಯು ಅರ್ಜಿಯಲ್ಲಿ ಸುಳ್ಳು ಅಥವಾ ತಪ್ಪು ಮಾಹಿತಿ ಒದಗಿಸಿದಲ್ಲಿ ನಿಯಮಾನುಸಾರ ಶಿಸ್ತಿನ ಕ್ರಮವನ್ನು ಜರುಗಿಸಲಾಗುವುದು.

**ಅರ್ಜಿಗಳನ್ನು ದೃಢೀಕರಿಸುವ ಸಕ್ಷಮಪ್ರಾಧಿಕಾರಿಗಳಿಗೆ ವಿಶೇಷ ಸೂಚನೆಗಳು:**

1. ಅಭ್ಯರ್ಥಿಗಳು ಭರ್ತಿ ಮಾಡಿ ಸಲ್ಲಿಸಿದ ಅರ್ಜಿಯನ್ನು ಸೇವಾಪುಸ್ತಕದಲ್ಲಿ ನಮೂದಿಸಿದ ದಾಖಲೆಯೊಂದಿಗೆ ಸಂಬಂಧಪಟ್ಟ ಲೆಕ್ಕಾಧಿಕಾರಿ/ಸಹಾಯಕ ಲೆಕ್ಕಾಧಿಕಾರಿ ಇವರು ಪರಿಶೀಲಿಸಿ ಈ ಕೆಳಕಂಡ ವಿವರಗಳನ್ನು ದೃಢೀಕರಿಸುವುದು.

   - ಅಭ್ಯರ್ಥಿಯ ಹೆಸರು ಕೆಲಸಕ್ಕೆ ಸೇರಿದ ದಿನಾಂಕ ಮತ್ತು ಹುದ್ದೆ/ಪ್ರಸ್ತುತ ಹುದ್ದೆ
   - ಅಭ್ಯರ್ಥಿಯು ಹಿಂದಿನ ಪರೀಕ್ಷೆಯಲ್ಲಿ ಪಡೆದಿರುವ ವಿನಾಯಿತಿ ವಿವರಗಳು
   - ಅರ್ಜಿ ನಮೂನೆಗೆ ಅನುಬಂಧಿಸಿರುವ ಪ್ರವೇಶ ಪತ್ರದ ನಮೂನೆಯನ್ನು ಪರಿಶೀಲಿಸುವುದು
   - ಒಂದೇ ಪರೀಕ್ಷೆಗೆ ಅಭ್ಯರ್ಥಿಯು ಮಾಡಿರುವ ಪ್ರಯತ್ನಗಳ ಸಂಖ್ಯೆ

2. ಅಭ್ಯರ್ಥಿಗಳು ಸಲ್ಲಿಸಿದ ಅರ್ಜಿಗಳನ್ನು ದೃಢೀಕರಿಸಿದ ನಂತರ ನೊಂದಣಿ ಅಂಚೆಯ ಮೂಲಕ ಅಥವಾ ಖುದ್ದಾಗಿ ದಿನಾಂಕ: 03.01.2023 ರೊಳಗಾಗಿ ಎಲ್ಲಾ ಅರ್ಜಿಗಳನ್ನು ಕ್ರೋಢೀಕರಿಸಿದ ಪತ್ರದೊಂದಿಗೆ ಲಗತ್ತಿಸಿ ಸಲ್ಲಿಸುವುದು. ಗೊತ್ತುಪಡಿಸಿದ ದಿನಾಂಕದ ನಂತರ ಬರುವ ಅರ್ಜಿಗಳನ್ನು ಅಂಗೀಕರಿಸುವುದಿಲ್ಲ. ವಿಳಂಬವಾದಲ್ಲಿ ಸಂಬಂಧಿಸಿದ ವಿಭಾಗಾಧಿಕಾರಿಗಳು ನೇರ ಹೊಣೆಗಾರರಾಗಿರುತ್ತಾರೆ.

ಪ್ರಧಾನ ವ್ಯವಸ್ಥಾಪಕರು
(ಆ.ಮತ್ತು ಮಾ.ಸಂ.ಅ)
ಗುವಿಸಕಂನಿ., ಕಲಬುರಗಿ.

ಪ್ರತಿಗಳು:-

1. ಮುಖ್ಯ ಇಂಜಿನಿಯರರು (ವಿ), ಕಾ ಮತ್ತು ಪಾಲನೆ ವಲಯ ಗು.ವಿ.ಸ.ಕಂ.ನಿ., ಕಲಬುರಗಿ/ಬಳ್ಳಾರಿ.
2. ಎಲ್ಲಾ ಅಧೀಕ್ಷಕ ಇಂಜಿನಿಯರರು (ವಿ), ಕಾ ಮತ್ತು ಪಾಲನೆ ವೃತ್ತ ಗು.ವಿ.ಸ.ಕಂ.ನಿ.,
3. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ (ವಿ), ಕಾ ಮತ್ತು ಪಾ /ಸಿ.ಎಸ್.ಸಿ ವಿಭಾಗಗಳು ಗು.ವಿ.ಸ.ಕಂ.ನಿ.,
4. ಕಾರ್ಯನಿರ್ವಾಹಕ ಅಭಿಯಂತರರು (ವಿ),(ಐಟಿ) ನಿಗಮ ಕಛೇರಿ ಗು.ವಿ.ಸ.ಕಂ.ನಿ., ಕಲಬುರಗಿ ರವರಿಗೆ Website (gescom.karnataka.gov.in) ಅಂತರ ಜಾಲದಲ್ಲಿ ಪ್ರಕಟಣೆಗಾಗಿ.

ಮು.ಕ.

# ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

ಭಾವ ಚಿತ್ರ ಅಂಟಿಸಬೇಕು ಹಾಗೂ ಕಛೇರಿ ಮುಖ್ಯಸ್ಥರು ದೃಢೀಕರಿಸಬೇಕು

2023 ....................ಸಾಲಿನ ......................ಪರೀಕ್ಷೆಯ ಪ್ರವೇಶಕ್ಕಾಗಿ ಅರ್ಜಿ ನಮೂನೆ.

| | |
|---|---|
| ನೋಂದಣಿ ಸಂಖ್ಯೆ | |

(ಅಭ್ಯರ್ಥಿಗಳು ಅರ್ಜಿ ಭರ್ತಿ ಮಾಡುವ ಮೊದಲು ಸುತ್ತೋಲೆಯಲ್ಲಿನ ಷರತ್ತು ಹಾಗೂ ಸೂಚನೆಗಳನ್ನು ಗಮನಿಸಿ)

| ಕ್ರ ಸಂ. | ವಿವರಗಳು | | | |
|---|---|---|---|---|
| 1 | ಅಭ್ಯರ್ಥಿ ಹೆಸರು ಬಿಡಿ ಅಕ್ಷರಗಳಲ್ಲಿ (ಸೇವಾ ಪುಸ್ತಕದಲ್ಲಿ ನಮೂದಿಸಿರುವಂತೆ) (BLOCK LETTERS) | ಕನ್ನಡ ಭಾಷೆಯಲ್ಲಿ | | |
| | | ಆಂಗ್ಲ ಭಾಷೆಯಲ್ಲಿ | | |
| 2 | ಕೆಲಸಕ್ಕೆ ಸೇರಿದಾಗ ಹೊಂದಿದ ಹುದ್ದೆ ಮತ್ತು ದಿನಾಂಕ<br>ಎ) ಹುದ್ದೆ /ಪದನಾಮ<br>ಬಿ) ಈಗಿನ ದರ್ಜೆ ಮತ್ತು /ಸಂಬಳ | | | |
| 3 | ಕೆಲಸ ಮಾಡುತ್ತಿರುವ ಕಛೇರಿ : ಶಾಖೆ/ಉಪ-ವಿಭಾಗ/ ವಿಭಾಗ/ವೃತ್ತ | ಶಾಖೆ | | |
| | | ಉಪ-ವಿಭಾಗ | | |
| | | ವಿಭಾಗ | | |
| | | ವೃತ್ತ | | |
| 4 | ಎ) ಕೆಲಸಕ್ಕೆ ಸೇರಿದ ದಿನಾಂಕ | | | |
| | ಬಿ) ಈಗಿನ ದರ್ಜೆಗೆ ನೇಮಕ/ಬಡ್ತಿ ಹೊಂದಿದ ದಿನಾಂಕ | | | |
| 5 | ಅಭ್ಯರ್ಥಿಯು ನೌಕರಿ ಪೂರ್ವದ ತರಬೇತಿಯ ನಂತರದ ಪರೀಕ್ಷೆ ತೇರ್ಗಡೆ ಹೊಂದಿ ಅರ್ಹತಾ ಪರೀಕ್ಷೆ ಅವಧಿಯಲ್ಲಿ ಪೂರ್ಣ ಗೊಳಿಸಿದ್ದಾರೆಯೇ? ಹಾಗಿದ್ದರೆ ತೇರ್ಗಡೆ ಹೊಂದಿರುವ ನೊಂದಣಿ ಸಂಖ್ಯೆ ತಿಂಗಳು, ಮತ್ತು ವರ್ಷವನ್ನು ತಿಳಿಸಿ | | | |
| 6 | ಸಂದಾಯ ಮಾಡಿರುವ ಪರೀಕ್ಷೆಯ ಶುಲ್ಕ (ಮೂಲ ರಶೀದಿಯನ್ನು ನಿಗದಿಪಡಿಸಿದ ಸ್ಥಳದಲ್ಲಿ ಅಂಟಿಸಬೇಕು | ಮೊಬಲಗಳು : | ರಶೀದಿ ಸಂಖ್ಯೆ | |
| | | ದಿನಾಂಕ : | ಸ್ಥಳ | |
| 7 | ಪರೀಕ್ಷಾ ಶುಲ್ಕ ಸಂದಾಯ ಮಾಡುವುದರಿಂದ ವಿನಾಯತಿ ಇದ್ದರೆ ಈಗ ಎಷ್ಟನೆಯ ಪ್ರಯತ್ನ | ಮೊದಲನೆಯ ಪ್ರಯತ್ನ | ಎರಡನೆಯ | ಎಷ್ಟನೆಯ |
| | | | | |

ನಾನು ಈ ಮೂಲಕ ದೃಢೀಕರಿಸುವುದೇನೆಂದರೆ ನಾನು ನೇಮಕವಾದ ದಿನಾಂಕದಿಂದ ಈ ಪರೀಕ್ಷೆ ತೆಗೆದುಕೊಳ್ಳುತ್ತಿರುವುದು...................................... ಸಲ ಹಾಗೂ ಈ ಅರ್ಜಿಯಲ್ಲಿ ನಮೂದಿಸಿರುವ ಕ್ರ.ಸಂಖ್ಯೆ 1 ರಿಂದ 7 ರ ವರೆಗಿನ ಎಲ್ಲಾ ವಿವರಗಳು ಸತ್ಯವಾಗಿವೆ. ತಪ್ಪು ಅಥವಾ ಅಪೂರ್ವ ಮಾಹಿತಿ ಎಂದು ಕಂಡು ಬಂದಲ್ಲಿ ಯಾವುದೇ ಮುನ್ಸೂಚನೆ ನೀಡದೆ ಅರ್ಜಿಯನ್ನು ತಿರಸ್ಕರಿಸಬಹುದಾಗಿದೆ.

ಸ್ಥಳ :

ದಿನಾಂಕ :

ಅಭ್ಯರ್ಥಿಯ ರುಜು :

ಹುದ್ದೆ :

## ಕಛೇರಿ ದೃಢೀಕರಣ

1. ಅರ್ಜಿ ಕ್ರ.ಸಂಖ್ಯೆ (1) ರಿಂದ (7) ರವರೆಗೆ ಅಭ್ಯರ್ಥಿಯು ನಮೂದಿಸಿರುವ ವಿವರಗಳನ್ನು ಸೇವಾ ಪುಸ್ತಕದಲ್ಲಿ ನಮೂದಿಸಿರುವಂತೆ ಪರಿಶೀಲಿಸಲಾಗಿದೆ ಹಾಗೂ ಸರಿಯಾಗಿದೆ ಎಂದು ದೃಢೀಕರಿಸಲಾಗಿದೆ.

2. ದೃಢೀಕರಿಸುವುದೇನೆಂದರೆ ಅಭ್ಯರ್ಥಿಯು ಪರೀಕ್ಷಾ ಅರ್ಜಿಯನ್ನು ಸಲ್ಲಿಸಿರುವುದು ಅರ್ಹತಾ ಪರೀಕ್ಷೆಯನ್ನು ಪೂರ್ಣಗೊಳಿಸುವ/ ಮುಂದಿನ ಉನ್ನತ ಹುದ್ದೆಗೆ ಬಡ್ತಿ ಪಡೆಯುವ/ಪರೀಕಾರ್ಥ ಅವಧಿ ಪೂರ್ಣಗೊಳಿಸುದ ಉದ್ದೇಶಗಳಿಗೆ ನಿರ್ಬಂಧಕ/ಅನಿವಾರ್ಯವುಳ್ಳದ್ದಾಗಿದೆ. ಮತ್ತು ನಮೂದಿಸಿರುವ ವಿವರಗಳನ್ನು ಪರಿಶೀಲಿಸಿದ್ದು ಅವು ಸರಿಯಾಗಿದೆ.

3. ದೃಢೀಕರಿಸುವುದೇನೆಂದರೆ ಅಭ್ಯರ್ಥಿಯು ಅರ್ಹತಾ ಪರೀಕ್ಷೆಯ ಅವಧಿಯನ್ನು ಇನ್ನೂ ಪೂರ್ಣಗೊಳಿಸಿಲ್ಲ.

4. ದೃಢೀಕರಿಸುವುದೇನೆಂದರೆ ಅಭ್ಯರ್ಥಿಯು ನೌಕರಿ ಪೂರ್ವ ತರಬೇತಿಯ ನಂತರದ ------------ 2023---------- ರಲ್ಲಿ ಪಟ್ಟಿ/ನೋಂದಣಿ ಸಂಖ್ಯೆ -------------- ಯೊಡನೆ ತೇರ್ಗಡೆ ಹೊಂದಿ ತನ್ನ ಅರ್ಹತಾ ಪರೀಕ್ಷೆಯ ಅವಧಿಯನ್ನು ಪೂರ್ಣಗೊಳಿಸಿರುತ್ತಾರೆ.

5. ಅಭ್ಯರ್ಥಿಯು ವೃತ್ತಿಪೂರ್ವ/ಬಡ್ತಿಪೂರ್ವ ತರಬೇತಿ ಪರೀಕ್ಷೆಗೆ ಕೂಡುತ್ತಿರುವದು ---------- ಸಲ

6. ಸಂದಾಯ ಮಾಡಿರುವ ಪರೀಕ್ಷೆಯ ಶುಲ್ಕ :

| ಮೊಬಲಗು | ರಶೀದಿ ಸಂಖ್ಯೆ | ದಿನಾಂಕ | ಸ್ಥಳ/ಕಛೇರಿ |
|---|---|---|---|
| | | | |

ಸಹಾಯಕ ಲೆಕ್ಕಾಧಿಕಾರಿ
ವಿಭಾಗ ಕಛೇರಿ

ವಿಭಾಗದ ಲೆಕ್ಕಾಧಿಕಾರಿ
ವಿಭಾಗ ಕಛೇರಿ

ರಶೀದಿಯನ್ನು ಇಲ್ಲಿ ಅಂಟಿಸಿ

# ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

ವೃತ್ತಿಪೂರ್ವ/ಬಡ್ತಿ ಪೂರ್ವ ತರಬೇತಿಯ ಪರೀಕ್ಷೆಯ ಪ್ರವೇಶ ಪತ್ರ ದಿನಾಂಕ: 20.01.2023.

ಭಾವ ಚಿತ್ರ ಅಂಟಿಸಬೇಕು ಹಾಗೂ ಕಛೇರಿ ಮುಖ್ಯಸ್ಥರು ದೃಢೀಕರಿಸಬೇಕು

| | |
|---|---|
| ನೊಂದಣಿ ಸಂಖ್ಯೆ | |

| ಕ್ರ ಸಂ. | ವಿವರಗಳು | |
|---|---|---|
| 1 | ಅಭ್ಯರ್ಥಿಯ ಹೆಸರು ಬಿಡಿ ಅಕ್ಷರಗಳಲ್ಲಿ (ಸೇವಾ ಪುಸ್ತಕದಲ್ಲಿ ನಮೂದಿಸಿರುವಂತೆ) (BLOCK LETTERS) | |
| 2 | ಹೊಂದಿರುವ ಹುದ್ದೆ/ಪದನಾಮ | |
| 3 | ಕೆಲಸ ಮಾಡುತ್ತಿರುವ ಕಛೇರಿ | |
| 4 | ಪರೀಕ್ಷಾ ಕೇಂದ್ರ | ಮಾನವ ಸಂಪನ್ಮೂಲ ತರಬೇತಿ ಕೇಂದ್ರ ನಿಗಮ ಕಛೇರಿ ಆವರಣ, ಕಲಬುರಗಿ |
| 5 | ಪರೀಕ್ಷಾ ಸಮಯ | ಪರೀಕ್ಷೆ ಸಮಯ ಬೆಳಿಗ್ಗೆ 10.00 ರಿಂದ 01.00 ಗಂಟೆಯವರೆಗೆ |
| 6 | ಪರೀಕ್ಷಾ ದಿನಾಂಕ | 20.01.2023 |
| 7 | ಅಭ್ಯರ್ಥಿಯ ಮಾದರಿ ರುಜು | |

ದೃಢೀಕರಿಸಿದ ಕಛೇರಿ ಮುಖ್ಯಸ್ಥರ,
ಸಹಿ ಮತ್ತು ಮುದ್ರೆಯೊಡನೆ

ಉಪಲೆಕ್ಕ ನಿಯಂತ್ರಣಾಧಿಕಾರಿ
(ಮಾ.ಸಂ.ಅ)
ಗು.ವಿ.ಸ.ಕಂ.ನಿ., ಕಲಬುರಗಿ

**ಸೂಚನೆ : ಅಭ್ಯರ್ಥಿಯು ಎಲ್ಲಾ ಅಂಕಣಗಳನ್ನು ಅಗತ್ಯವಾಗಿ ಭರ್ತಿಮಾಡಬೇಕು.**

## ಅಭ್ಯರ್ಥಿಗಳಿಗೆ ಸೂಚನೆಗಳು

ಈ ಕೆಳಕಂಡ ಸೂಚನೆಗಳನ್ನು ಅಭ್ಯರ್ಥಿಗಳ ತಿಳುವಳಿಕೆಗಾಗಿ ಸೂಚಿಸುತ್ತ ಎಚ್ಚರಿಕೆ ನೀಡುವುದೇನೆಂದರೆ ಯಾವುದೇ ಒಂದು ಸೂಚನೆ ಉಲ್ಲಂಘಿಸಿದ ಪಕ್ಷದಲ್ಲಿ ಅಭ್ಯರ್ಥಿಯ ಉತ್ತರ ಪುಸ್ತಕವನ್ನು ಮೌಲ್ಯಮಾಪನಕ್ಕೆ ಪರಗಣಿಸುವುದಿಲ್ಲ ಹಾಗೂ ಅಭ್ಯರ್ಥಿಯು ಮುಂದಿನ ಮೂರು ಪರೀಕ್ಷೆಯಿಂದ ಉಚ್ಚಾಟನೆಯಾಗುವ ಸಾಧ್ಯತೆ ಇರುತ್ತದೆ.

1. ಅಭ್ಯರ್ಥಿಗಳು ತಮ್ಮ ನೊಂದಣಿ ಸಂಖ್ಯೆಯನ್ನು ಉತ್ತರ ಪುಸ್ತಕದಲ್ಲಿ ನಿಗದಿತ ಸ್ಥಳದಲ್ಲಿ ಮಾತ್ರ ನಮೂದಿಸಬೇಕು. ಉತ್ತರ ಪತ್ರಿಕೆ ಮುಗಿದು ಹೆಚ್ಚುವರಿ ಹಾಳೆಗಳನ್ನು ಪಡೆದಲ್ಲಿ ನೊಂದಣಿ ಸಂಖ್ಯೆಯನ್ನು ಅದರಲ್ಲಿ ನಮೂದಿಸಬಾರದು.
2. ಅಭ್ಯರ್ಥಿಗಳು ಉತ್ತರ ಪುಸ್ತಕ ಅಥವಾ ಹೆಚ್ಚುವರಿ ಹಾಳೆಗಳಲ್ಲಿ ಎಲ್ಲೂ ತಮ್ಮ ಹೆಸರನ್ನು ಅಥವಾ ಯಾವುದೇ ದೇವರ ಹೆಸರನ್ನು ಧಾರ್ಮಿಕ ಚಿಹ್ನೆಯನ್ನು ಅಥವಾ ಯಾವ ತರಹದ ಗುರುತನ್ನು ಬರೆಬಾರದು/ಮಾಡಬಾರದು.
3. ಎಲ್ಲಾ ಉತ್ತರಗಳು ಸಾಮ್ಯಾನ ನೀಲಿ/ಕಪ್ಪು ಶಾಯಿ ಅಥವಾ ಡಾಟ್ ಪೆನ್ನು ಬಳಸಿ ಬರೆಯಬೇಕು. ಉತ್ತರ ಬರೆಯುವ ಮಧ್ಯದಲ್ಲಿ ಪೆನ್ನು ಬದಲಾವಣೆಯಿಂದ ಶಾಯಿಯ ಬಣ್ಣ ವ್ಯತ್ಯಾಸವಾದಲ್ಲಿ ಪರಿವೀಕ್ಷಕರ ಗಮನಕ್ಕೆ ತಂದು ಅವರ ಸಹಿಯನ್ನು ನೊಂದಾಯಿಸತಕ್ಕದು.
4. ಉತ್ತರ ಪುಸ್ತಕದ ಹಾಳೆಗಳನ್ನು ಇಂಗ್ಲಿಷ ಸಂಖ್ಯೆಗಳಲಿ ಮಾತ್ರ ಬರೆಯುವುದು (ಪೇಜ್ ನಂಬರ್)
5. ಪರೀಕ್ಷೆಯ ವಿವರಗಳನ್ನು ಹೊಂದಿಕೆಯಲ್ಲಿ ನಿಗದಿಸಿರುವ ಸ್ಥಳವನ್ನು ಬಿಟ್ಟು ಉತ್ತರ ಪತ್ರಿಕೆಯ ಒಳಭಾಗದಲ್ಲಿ ಎಲ್ಲೂ ಬರೆಯಬಾರದು.
6. ಉತ್ತರ ಪತ್ರಿಕೆಯಲ್ಲಿ ಪ್ರಶ್ನೆ ಸಂಖ್ಯೆ ಹಾಗೂ ಅದರ ಸಂಬಂಧವಾದ ಉತ್ತರಗಳನ್ನು ಮಾತ್ರ ಹೊಂದಿರಬೇಕು ಯಾವ ತರಹದ ಅಲಂಕಾರ. ಕಲಾತ್ಮಕ ಚಿನ್ಹೆ ಅಥವಾ ಗುರುತುಗಳನ್ನು ಉತ್ತರ ಪ್ರತಿಕೆಯಲ್ಲಿ ಗಮನಿಸಿದರೆ ಸಂಬಂಧಪಟ್ಟ ಅಭ್ಯರ್ಥಿಗಳನ್ನು ದಂಡನೆಗೆ ಗುರಿಪಡಿಸಲಾಗುವುದು. ಇಲಾಖೆಯ ಪರೀಕ್ಷಾ ಮಂಡಳಿಯ ನಿರ್ಧಾರ ಸದರಿ ವಿಷಯಲ್ಲಿ ಕೊನೆಯದು ಹಾಗೂ ಯಾವ ತರಹದ ನೆಪವನ್ನು ಪರಿಗಣಿಸಲಾಗುವುದಿಲ್ಲ/ಆದರಿಂದ ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯಲ್ಲಿ ಪ್ರಶ್ನಗಳಿಗೆ ನೀಡಿರುವ ಸೂಚನೆಗಳನ್ನು ತಪ್ಪದೆ ಗಮನಿಸಿ. ಪಾಲಿಸತಕ್ಕದ್ದು ಮತ್ತು ಪರಿವೀಕ್ಷಕರು ಪರೀಕ್ಷಾ ಕೊಠಡಿಗಳಲ್ಲಿ ನೀಡುವ ಸೂಚನೆಗಳನ್ನು ಸಹ ಎಚ್ಚರಿಕಯಿಂದ ಪಾಲಿಸತಕ್ಕದ್ದು.
7. ಪರೀಕ್ಷೆ ನಡೆಯುವ ಸಮಯದಲ್ಲಿ ಅಭ್ಯರ್ಥಿಗಳು ಮಾತನಾಡುವುದಾಗಲೀ ಅಥವಾ ಯಾವುದೇ ರೀತಿ ಬೇರೆಯವರ ಜೊತೆ ಸಂಪರ್ಕಿಸುವುದನ್ನಾಗಲಿ ಮಾಡಬಾರದು.

## ಸಾಮಾನ್ಯ ತಿಳುವಳಿಕೆ

1. ಪರೀಕ್ಷಾ ಸಭಾಂಗಣದ/ ಪರಿವೀಕ್ಷಕರು ಯಾವಾಗ ಕೇಳಿದರೂ ಅಭ್ಯರ್ಥಿಗಳು ಪ್ರವೇಶ ಪತ್ರವನ್ನು ಹಾಜರು ಪಡಿಸಬೇಕು.
2. ಪರೀಕ್ಷೆಯು ಪ್ರಾರಂಭವಾಗುವುದಕ್ಕೆ ಹತ್ತು ನಿಮಿಷಗಳ ಮುಂಚಿಯೇ ತಮ್ಮ ಸ್ಥಳಗಳಲ್ಲಿರಬೇಕು.
3. ಅಭ್ಯರ್ಥಿಗಳು ಲೇಖನಿ/ ಪೆನ್ನುಗಳನ್ನು ತಾವೇ ತರಬೇಕು.
4. ಪರೀಕ್ಷೆ ಪ್ರಾರಂಭವಾದ ಅರ್ಧ ಗಂಟೆಯ ನಂತರ ಅಭ್ಯರ್ಥಿಗಳು ಪರೀಕ್ಷಾ ಸಭಾಂಗಣ / ಹಜಾರವನ್ನು ಪ್ರವೇಶಿಸಲು ಇಲ್ಲವೇ ಪರೀಕ್ಷೆಯು ಪ್ರಾರಂಭವಾದ ನಂತರ ಅರ್ಧ ಗಂಟೆಗಿಂತ ಮುಂಚಿತವಾಗಿ ಯಾವುದೇ ಅಭ್ಯರ್ಥಿಗಳು ಪರೀಕ್ಷಾ ಸಭಾಂಗಣದಿಂದ/ ಹಜಾರದಿಂದ ಹೋಗಲು ಅನುಮತಿ ಕೊಡಲಾಗುವುದಿಲ್ಲ.
5. ಪುಸ್ತಕಗಳು ಮಾರ್ಗದರ್ಶಿಕೆಗಳು (ಕೈಪಿಡಿಗಳು) ಟಿಪ್ಪಣಿಗಳು ಮುಂತಾದವುಗಳನ್ನು ಒಳಗೆ ತರುವಂತಿಲ್ಲ
6. ಪರೀಕ್ಷೆ ಕೇಂದ್ರಗಳ ಬಗ್ಗೆ ಪ್ರ.ವ್ಯ. (ಆ ಮತ್ತು ಮಾ.ಸಂ.ಅ) ಗು.ವಿ.ಸ.ಕಂ. ಕಲಬುರಗಿ ಅವರುಗಳು ಅಧಿಸೂಚನೆ ಕೊಡುತ್ತಾರೆ.
7. ಅಭ್ಯರ್ಥಿಯು "ಮಾದರಿ ರುಜು ಅಂಕಣದಲ್ಲಿ" ತನ್ನ ರುಜುವನ್ನು ಸಂಬಳ ಕೊಡುವ ಅಧಿಕಾರಿಯ/ತಕ್ಷಣದ ಮೇಲಾಧಿಕಾರಿ ಎದುರಿನಲ್ಲಿ ಹಾಕಬೇಕು ಮತ್ತು ಸಂಬಂಧಪಟ್ಟ ಅಧಿಕಾರಿಯು ಕಛೇರಿ ಮುದ್ರೆಯನ್ನು ಹಾಕಿ ಅದನ್ನು ದೃಢಿಕರಿಸಬೇಕು.
8. ಮೊಬೈಲ್ ಫೋನ್‌ಗಳನ್ನು ಪರೀಕ್ಷಾ ಕೊಠಡಿಗೆ ತರುವದನ್ನು ನಿಷೇಧಿಸಲಾಗಿದೆ.

## ಅಭ್ಯರ್ಥಿಗಳಿಗೆ ಸೂಚನೆಗಳು

1. ಪರೀಕ್ಷೆ ನಿಗದಿಪಡಿಸಿರುವ ಪರೀಕ್ಷಾ ಶುಲ್ಕ ರೂ. 354/-

2. ಮೇಲಿನ ಪರೀಕ್ಷೆಗಳಿಗೆ ನಿಯಮಿತ ನಮೂನೆಯಲ್ಲಿ ಅರ್ಜಿಗಳನ್ನು ಕ್ಯಾಲೆಂಡರ್ ಪ್ರಕಾರ ಗೊತ್ತು ಪಡಿಸಿರುವ ಗಡುವು/ಕೊನೆಯ ದಿನಾಂಕದ ಒಳಗಾಗಿ ತಲುಪುವಂತೆ ಅವರ ವಿಭಾಗದ ಅಧಿಕಾರಿಗಳ ಮೂಲಕವಾಗಿ ಪ್ರವ್ಯ (ಆ. ಮತ್ತು ಮಾ.ಸಂ.ಅ ) ಕಲಬುರಗಿ ಇವರಿಗೆ ಕಳಿಸಬೇಕು.

3. ಎರಡು ಪ್ರಯತ್ನಗಳಿಗೆ ಮಾತ್ರ ಅಭ್ಯರ್ಥಿಗಳಿಗೆ ಉಚಿತವಾಗಿ ಅನುಮತಿ ನೀಡಲಾಗುವುದು. ಅನಂತರ ಪ್ಯಾರಾ ಒಂದ (1) ರಲ್ಲಿರುವಂತೆ ಗೊತ್ತು ಪಡಿಸಿರುವ ಶುಲ್ಕವನ್ನು ಗು.ವಿ.ಸ.ಕಂ.ನ ಯಾವುದೇ ಕಛೇರಿಯಲ್ಲಿ ಸಂದಾಯ ಮಾಡಬೇಕು. ಮತ್ತು ಮೂಲ ರಸೀದಿಯನ್ನು, ಅರ್ಜಿಯಲ್ಲಿ ಅದಕ್ಕಾಗಿ ಒದಗಿಸಿರುವ ಸ್ಥಳದಲ್ಲಿ ಅಂಟಿಸಬೇಕು. ಒಂದು ಅವಧಿಯ ಪರೀಕ್ಷೆಗೆ ಸಂದಾಯವಾದ ಶುಲ್ಕವನ್ನು ಮುಂದಿನ ಅವಧಿಯ ಪರೀಕ್ಷೆಗಳಿಗೆ ಹೊಂದಿಸಲಾಗುವುದಿಲ್ಲ. ಅಜಾಗೃತಿಯಿಂದಾಗಿ ಹೆಚ್ಚಾಗಿ ಕಟ್ಟಿರುವ ಶುಲ್ಕವನ್ನು ಸಹ ಮರು ಪಾವತಿ ಮಾಡುವುದಿಲ್ಲ ಅಥವಾ ಹೊಂದಾಣಿಕೆ ಮಾಡುವುದಿಲ್ಲ.

4. ಅಭ್ಯರ್ಥಿಯು ಪ್ರತಿಯೊಂದು ಅಂಕಣವನ್ನೂ ತುಂಬಲೇಬೇಕು ಮತ್ತು ಯಾವ ಅಂಕಣವನ್ನೂ 'ಖಾಲಿ, ಬಿಡಬಾರದು.

5. ಅಪೂರ್ಣವಾದ ಅರ್ಜಿಗಳನ್ನು ಸೂಚನೆ ಕೊಡದೆ ತಿರಸ್ಕರಿಸಲಾಗಿವುದು.

6. ಮಾಪಕ ಓದುಗ/ ಮೇಲ್ವಿಚಾರಕ/ ಆಪರೇಟರ್/ ನಿರ್ವಹಣಾ ಸಿಬ್ಬಂದಿ /ಕಿರಿಯ ಮಾಪಕ ಓದುಗ ಅಭ್ಯರ್ಥಿಗಳಿಗೆ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲು ಶೇಕಡಾ 40 ಅಂಕಗಳು ಪಡೆಯಬೇಕು.

7. ಪಠ್ಯ ಪುಸ್ತಕಗಳು, ಮಾರ್ಗದರ್ಶಿಕೆಗಳು (ಕೈಪಿಡಿಗಳು) ಟಿಪ್ಪಣಿಗಳು ಮುಂತಾದುವನ್ನು ಒಳಗೆ ತರುವಂತಿಲ್ಲ.

8. ಬೇರೆ ಯಾವುದೇ ವಿವರಗಳು ಬೇಕಾಗಿದ್ದಲ್ಲಿ, ಪ್ರವ್ಯ(ಆಮತ್ತು ಮಾಸಂ), ಗುವಿಸಕಂನಿ, ಕಲಬುರಗಿ ಇವರಿಗೆ ಸಮುಚಿತ ಮಾರ್ಗದ ಮೂಲಕ ಬರೆಯಬಹುದು.

## ವಿಭಾಗಾಧಿಕಾರಿಗೆ ಸೂಚನೆಗಳು

1. ಅಭ್ಯರ್ಥಿಗಳು ಸಲ್ಲಿಸಿರುವ ಅರ್ಜಿಗಳನ್ನು ಪ್ರವ್ಯ (ಆ. ಮತ್ತು ಮಾ.ಸಂ.ಅ) ಗುವಿಸಕಂ. ಕಲಬುರಗಿ ಇವರಿಗೆ ಗೊತ್ತು ಪಡಿಸಿರುವ ದಿನಾಂಕ ಅಥವಾ ಅದಕ್ಕೂ ಮುಂಚೆ ತಲುಪುವಂತೆ ಕಳಿಸಿಕೊಡಬೇಕು. ಗೊತ್ತು ಪಡಿಸಿದ ದಿನಾಂಕದ ನಂತರ ಬರುವ ಅರ್ಜಿಗಳನ್ನು ತಿರಸ್ಕರಿಸಲಾಗುವದು ಮತ್ತು ತಡವಾದದ್ದರ ಜವಾಬ್ದರಿಯನ್ನು ವಿಭಾಗಾಧಿಕಾರಿಗಳ ಮೇಲೆ ಹೊರಿಸಲಾಗುವುದು.

2. ಅರ್ಜಿಗಳು, ಸೇವಾ ಪುಸ್ತಕಗಳಲ್ಲಿ ದಾಖಲಿಸಿರುವ ವಿವರಗಳಿಗೆ ಸಂಬಂಧಿಸಿದಂತೆ ಲೆಕ್ಕಾಧಿಕಾರಿ/ಸಹಾಯಕ ಲೆಕ್ಕಾಧಿಕಾರಿ ಇವರಿಂದ ಪರಿಶೀಲಿಸಲ್ಪಡಬೇಕು ಮತ್ತು ವಿಶೇಷವಾಗಿ ಅರ್ಜಿಗಳಲ್ಲಿ ಈ ಕೆಳಗಿನ ಅಂಶಗಳ ಶುದ್ಧತೆ/ಸತ್ಯತೆಯ ಬಗ್ಗೆ ದೃಢೀಕರಿಸಬೇಕು.

   ಅ. ಕೆಲಸಕ್ಕೆ ಸೇರಿದ ದಿನಾಂಕ/ ಪದವೃಂದ (ಕೇಡರ)
   ಆ. ಈಗಾಗಲೇ ತೇರ್ಗಡೆ ಹೊಂದಿರುವ ಪರೀಕ್ಷೆಗಳು, ನೊಂದಣಿ ಸಂಖ್ಯೆ ಮತ್ತು ವರ್ಷದ ವಿವರಗಳು.
   ಇ. ಯಾವುದೇ ವಿನಾಯಿತಿಗಳಿದ್ದರೆ.
   ಈ. ಒಂದೆ ಪರೀಕ್ಷೆಗೆ ಅಭ್ಯರ್ಥಿಯು ಮಾಡಿರುವ ಪ್ರಯತ್ನಗಳ ಸಂಖ್ಯೆ.
   ಉ. ನಿಗದಿ ಪಡಿಸಿರುವ ಪರೀಕ್ಷಾ ಶುಲ್ಕ ಸಂದಾಯಿಸಿರುವ ಬಗ್ಗೆ.
   ಊ. ಪರೀಕ್ಷೆ ನಡೆಯುವ ಸ್ಥಳ.

3. ಅರ್ಜಿಯ ಮೇಲೆ ಅಚ್ಚಾಗಿರುವ ದೃಢಿಕರಣಗಳನ್ನು ಸರಿಯಾಗಿ ಪರಿಶೀಲಿಸಿದ ನಂತರ ರುಜು ಮಾಡಬೇಕು.